ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 3, July-August 2024, Pp. 55-64
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸ್ವಚ್ಛ ಭಾರತ ಯೋಜನೆಯ ಪ್ರಗತಿಯ ಮುನ್ನೋಟ ವಿಶೇಷ ಉಲ್ಲೇಖದೊಂದಿಗೆ ಮಂಡ್ಯ ಜಿಲ್ಲೆಯ ಸ್ಥಳೀಯ ಸರ್ಕಾರಗಳ ಪಾತ್ರದ ಅಧ್ಯಯನ

**ಬೇಬಿ ಕಲಾ**
ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

***Abstract:***
*ಈ ಸಂಶೋಧನಾ ಲೇಖನವು ಸ್ವಚ್ಛ ಭಾರತ ಯೋಜನೆಯ ಪ್ರಗತಿಯ ಮುನ್ನೋಟವನ್ನು ಅಭಿವ್ಯಕ್ತಪಡಿಸುವ ಗುರಿಯೊಂದಿಗೆ ಮಂಡ್ಯ ಜಿಲ್ಲೆಯ ಸ್ಥಳೀಯ ಸರ್ಕಾರಗಳ ಪಾತ್ರವನ್ನು ಕೇಂದ್ರಿಕರಿಸುತ್ತದೆ. ಇದಲ್ಲದೇ ಜಿಲ್ಲಾವಾರು ಪ್ರಗತಿಯ ಬೆಳವಣಿಗೆಗಳು, ಹಿಂದುಳಿದ ಜಿಲ್ಲೆಗಳ ಬದಲಾವಣೆಯ ಕುರಿತು ಮಾಹಿತಿ ಒದಗಿಸುವ ಉದ್ದೇಶವನ್ನು ಹೊಂದಿದ್ದು, ಈ ಲೇಖನದ ಅಧ್ಯಯನದ ಕೇಂದ್ರ ಬಿಂದುವಾದ ಮಂಡ್ಯ ಜಿಲ್ಲೆಯ ಸ್ಥಳೀಯ ಸರ್ಕಾರಗಳ ಪರಿಣಾಮಕಾರಿಯಾದ ಕ್ರಮಗಳೊಂದಿಗೆ ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆಗಳಲ್ಲಿ 2014 ರಿಂದ 2021ರವರೆಗಿನ ಗೃಹ ಶೌಚಾಲಯಗಳ ನಿರ್ಮಾಣ, ಪ್ರೋತ್ಸಾಹ ಧನಗಳು, ಕೇಂದ್ರ ಮತ್ತು ರಾಜ್ಯ ಅನುದಾನ ವಿವರಗಳು ಮತ್ತು ಪ್ರಗತಿಯ ಹೆಜ್ಜೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.*

**Keywords:** *ಸ್ವಚ್ಛ ಭಾರತ ಯೋಜನೆ, ಮಂಡ್ಯ ಸ್ಥಳೀಯ ಸರ್ಕಾರಗಳು, ಪ್ರಗತಿಯ ಮುನ್ನೋಟಗಳು.*

## ಪೀಠಿಕೆ

ರಾಜ್ಯದಲ್ಲಿ 2012–13ನೇ ಸಾಲಿನಲ್ಲಿ ನಡೆಸಿದ ಬೇಸ್‌ಲೈನ್ ಸಮೀಕ್ಷೆಯಂತೆ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 70.32 ಲಕ್ಷ ಕುಟುಂಬಗಳಿದ್ದು, 24.83 ಲಕ್ಷ ಕುಟುಂಬಗಳು ಶೌಚಾಲಯ ಹೊಂದಿದ್ದವು. ನಂತರ 2013–14 ಸಾಲಿನಿಂದ 2018–19 ನೇ ಸಾಲಿನ ಅಕ್ಟೋಬರ್ 31ರ ವರೆಗೆ 45.49 ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದೆ.[1] ಉಳಿದಿರುವ ಕುಟುಂಬಗಳಿಗೆ ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಿಸಲು ಪಂಚತಂತ್ರಾಂಶದಲ್ಲಿ ಕಾರ್ಯಾದೇಶವನ್ನು ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 7.10 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ದಾಖಲೆ ನಿರ್ಮಿಸಲಾಗಿದೆ.[2]

ನವೆಂಬರ್ 19, 2018 ರಂದು ವಿಶ್ವ ಶೌಚಾಲಯ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯದಲ್ಲಿ ಎಲ್ಲಾ ಬಾಕಿ ಇರುವ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಘೋಷಿಸುವ ಗುರಿ ಹೊಂದಲಾಗಿತ್ತು. ಈ ನಿಟ್ಟಿನಲ್ಲಿ ರಾಜ್ಯದಲ್ಲಿ 2018ರ ವರೆಗೆ ಕರ್ನಾಟಕದಲ್ಲಿ 26 ಜಿಲ್ಲೆಗಳು, 153 ತಾಲೂಕುಗಳು, 5355 ಗ್ರಾಮ ಪಂಚಾಯತಿಗಳು, 25,119 ಗ್ರಾಮಗಳು ಬಯಲು ಬಹಿರ್ದೆಸೆ ಮುಕ್ತವಾಗಿರುವುದಾಗಿ ಘೋಷಣೆ

***Please cite this article as:*** ಬೇಬಿ ಕಲಾ. (2024). ಸ್ವಚ್ಛ ಭಾರತ ಯೋಜನೆಯ ಪ್ರಗತಿಯ ಮುನ್ನೋಟ ವಿಶೇಷ ಉಲ್ಲೇಖದೊಂದಿಗೆ ಮಂಡ್ಯ ಜಿಲ್ಲೆಯ ಸ್ಥಳೀಯ ಸರ್ಕಾರಗಳ ಪಾತ್ರದ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 55–64

ಮಾಡಲಾಗಿದೆ. ಈ ಪೈಕಿ 2016–17ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೊಡಗು, ದಕ್ಷಿಣ ಕನ್ನಡ (ಮಂಗಳೂರು) ಮತ್ತು ಉಡುಪಿ ಸೇರಿದಂತೆ 5 ಜಿಲ್ಲೆಗಳು, 24 ತಾಲೂಕುಗಳು, 5 ಸಾವಿರ ಗ್ರಾಮಗಳು ಬಯಲು ಬಹಿರ್ದೆಸೆ ಮುಕ್ತವಾಗಿರುವುವುದಾಗಿ ಘೋಷಣೆ ಮಾಡಲಾಗಿತ್ತು.[3]

2017–18ನೇ ಸಾಲಿನಲ್ಲಿ ಅಕ್ಟೋಬರ್ 2, 2017ರ ಅಂತ್ಯಕ್ಕೆ ಕೋಲಾರ, ಮಂಡ್ಯ, ಹಾಸನ, ರಾಮನಗರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಸೇರಿ 6 ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು ಸದರಿ ಜಿಲ್ಲೆಗಳಿಗೆ ಅಕ್ಟೋಬರ್ 02, 2017 ರಂದು ಗಾಂಧೀ ಜಯಂತಿ ದಿನದಂದು ಪುರಸ್ಕಾರ ನೀಡಿ ಗೌರವಿಸಲಾಗಿದೆ. 2017–18ನೇ ಸಾಲಿನಲ್ಲಿ ಅಕ್ಟೋಬರ್ 2, 2017 ರಿಂದ ಮಾರ್ಚ್ 2018ರ ಮಾಹೆಯವರೆಗೆ ದಾವಣಗೆರೆ, ಗದಗ, ಉತ್ತರಕನ್ನಡ, ಹಾವೇರಿ, ಚಿಕ್ಕಬಳ್ಳಾಪುರ, ಕೊಪ್ಪಳ, ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ಒಟ್ಟು 1050 ಗ್ರಾಮ ಪಂಚಾಯತಿಗಳು ಬಯಲು ಬಹಿರ್ದೆಸೆ ಮುಕ್ತವಾಗಿದೆ. ಪ್ರಸಕ್ತ 2018–19ನೇ ಸಾಲಿನಲ್ಲಿ ಬಾಗಲಕೋಟೆ, ಬಳ್ಳಾರಿ, ಯಾದಗಿರಿ, ಚಿತ್ರದುರ್ಗ, ಕಲಬುರ್ಗಿ ಮತ್ತು ಬಳ್ಳಾರಿ ಜಿಲ್ಲೆಗಳು ಬಯಲು ಬಹಿರ್ದೆಸೆ ಮುಕ್ತವಾಗಿರುವುದಾಗಿ ಘೋಷಣೆ ಮಾಡಲಾಗಿದೆ.[4]

**ಜಿಲ್ಲಾವಾರು ಪ್ರಗತಿಯ ಮುನ್ನೋಟ**

ಪ್ರತಿ ಜಿಲ್ಲೆಯೂ ಬಯಲು ಬಹಿರ್ದೆಸೆಯ ವಿರುದ್ಧ ತನ್ನದೇ ಆದ ರೀತಿಯ ಹೋರಾಟ ನಡೆಸಿದೆ. ಉಡುಪಿ ಜಿಲ್ಲೆಯಲ್ಲಿ ಧಾರ್ಮಿಕ ಮುಖಂಡರಿಂದ ನಾಗನಡೆಯ ಮೂಲಕ ಮೂಢನಂಬಿಕೆಯನ್ನು ಹೋಗಲಾಡಿಸಿ, ನೀರಿನ ಮಟ್ಟ ಎತ್ತರದಲ್ಲಿರುವ ಕರಾವಳಿ ತೀರಕ್ಕೆ ತಕ್ಕಂತೆ ನೂತನ ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎನ್.ಎಸ್.ಎಸ್. ಕಾರ್ಯಕರ್ತರು, ಸ್ವಸಹಾಯ ಸಂಘದ ಸದಸ್ಯರು ಹಾಗೂ ಸರ್ಕಾರೇತರ ಸಂಸ್ಥೆಗಳಿಂದ ಶ್ರಮದಾನ ಕಾರ್ಯಕ್ರಮದ ಮೂಲಕ ಚಂದಾ ಸಂಗ್ರಹಿಸಿ ಬೇಸ್‌ಲೈನ್‌ನಲ್ಲಿರುವ ಕುಟುಂಬಗಳಿಗೆ ಶೌಚಾಲಯವನ್ನು ನಿರ್ಮಿಸಲಾಯಿತು.[5]

ಬೆಂಗಳೂರು ನಗರ ಪ್ರದೇಶದಲ್ಲಿ ಮನೆಮನೆಗೂ ತೆರಳಿ ಸಂವಹನ ಚಟುವಟಿಕೆಗಳಿಂದ ಜನಜಾಗೃತಿ ಮೂಡಿಸಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸತತ ಮೇಲ್ವಿಚಾರಣೆಯ ಫಲವಾಗಿ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಎಂದು ಘೋಷಣೆ ಮಾಡಲಾಯಿತು. ಬೆಂಗಳೂರು ಗ್ರಾಮೀಣ ಭಾಗದಲ್ಲಿ ಸಿಇಓ ಹಾಗೂ ಇತರ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಿ ಶೌಚಾಲಯಗಳನ್ನು ನಿರ್ಮಿಸಲಾಯಿತು.[6]

ಕೊಡಗು ಜಿಲ್ಲೆಯಲ್ಲಿ ನಡೆದ ಅಭಿಯಾನ ಶ್ಲಾಘನೀಯವಾದದ್ದು, ಬೆಟ್ಟಗಳ ತುದಿಯಲ್ಲಿ ಹಾಗೂ ಬಹಳ ದೂರದ ಬುಡಕಟ್ಟಿನ ಪ್ರದೇಶಗಳಲ್ಲಿ ಶೌಚಾಲಯದ ನಿರ್ಮಾಣ ಕಷ್ಟವೂ ಹಾಗೂ ಪ್ರಾಕೃತಿಕ ವೈಪರೀತ್ಯದ ಕಾರಣದಿಂದ ಅವುಗಳು ಬಹಳ ಬೇಗ ಒಡೆದು ಹೋಗುವ ಸಾಧ್ಯತೆ ಇರುವುದರಿಂದ ತಗಡಿನಿಂದ ಸಿದ್ಧಪಡಿಸಿದ ಶೌಚಾಲಯದ ಗೋಡೆಗಳನ್ನು ಕೈಯಿಂದಲೇ ಸಾಗಿಸಿ ಶೌಚಾಲಯ ನಿರ್ಮಿಸಲಾಯಿತು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಶಾಲಾಮಕ್ಕಳಿಂದ ಜಾಗೃತಿಗಾಗಿ ಜಾಥಾ ನಡೆಸಿ ಮಕ್ಕಳಿಂದ ಬದಲಾವಣೆ ಹುಟ್ಟುವಂತೆ ಮಾಡಿ ಬಯಲು ಬಹಿರ್ದೆಸೆ ಮುಕ್ತ ಎಂಬ ಮಾನ್ಯತೆ ಪಡೆಯಲಾಯಿತು.[7]

ಕೋಲಾರದಲ್ಲಿ ನಡೆದ ಅಭಿಯಾನ ಅತ್ಯಂತ ಶ್ರಮದಾಯಕವೂ ಸ್ಫೂರ್ತಿದಾಯಕವೂ ಆಗಿದೆ. ಕರ್ನಾಟಕದಲ್ಲೇ ಅತ್ಯಂತ ಕಠಿಣ ಜಿಲ್ಲೆಯಾದ ಕೋಲಾರ ಸಮುದಾಯ ಸಂಘಟನೆಯಿಂದ, ಜಿಲ್ಲಾ ಸಿಇಓರವರ ಅಹರ್ನಿಶಿ ಮೇಲ್ವಿಚಾರಣೆಯ ಪ್ರಯತ್ನವಾಗಿ 100 ದಿನಗಳಲ್ಲಿ 75,000

ಶೌಚಾಲಯಗಳನ್ನು ನಿರ್ಮಿಸಿ ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆ ಎಂಬ ಮಾನ್ಯತೆ ಪಡೆಯಿತು.[8]

ರಾಮನಗರದಲ್ಲಿ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೃಷಿ, ತೋಟಗಾರಿಕೆ, ಕಂದಾಯ ಹಾಗೂ ಇನ್ನಿತರ ಇಲಾಖೆಗಳೂ ಒಟ್ಟುಗೂಡಿ ಜಿಲ್ಲೆಯ ಸ್ವಚ್ಛತಾ ಪ್ರಗತಿಗಾಗಿ ಶ್ರಮಿಸಿದರು. ಇದರ ಜೊತೆಗೆ, ಶಿವಮೊಗ್ಗ ಜಿಲ್ಲೆಯಲ್ಲಿ ಕಲಾಜಾಥಾವನ್ನು ಜಾಗೃತಿಗಾಗಿ ಆಯೋಜಿಸಿ ವೈಯಕ್ತಿಕ ಶೌಚಾಲಯಗಳಿಗಾಗಿ ಒತ್ತಾಯ ತರಲಾಯಿತು. ಜಿಲ್ಲಾ ಅಧಿಕಾರಿಗಳ ತೀವ್ರ ಮೇಲ್ವಿಚಾರಣೆಯಿಂದ ಜಿಲ್ಲೆ ಕ್ಷಿಪ್ರ ಪ್ರಗತಿ ಸಾಧಿಸಿತು.[9]

ಮಂಡ್ಯ ಜಿಲ್ಲೆಯಲ್ಲಿ ಮ್ಯಾರಥಾನ್, ಸಂವಹನ ಚಟುವಟಿಕೆಗಳು, ಜಿಲ್ಲಾ ಸಂಪನ್ಮೂಲ ಗುಂಪುಗಳ ನಿರ್ಮಾಣದಿಂದ ಶೌಚಾಲಯ ನಿರ್ಮಿಸಲಾಗಿದೆ. ಜಿಲ್ಲೆಯು ಕಲ್ಲುಮಣ್ಣುಗಳಿಂದ ಕೂಡಿದ ನೆಲವಾದುದ್ದರಿಂದ ಅದಕ್ಕೆ ತಕ್ಕ ತಂತ್ರಜ್ಞಾನವನ್ನು ರೂಪಿಸಿ ನೆಲಮಟ್ಟಕ್ಕಿಂತ ಎತ್ತರ ಪ್ರದೇಶದಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಯಿತು. ಹಾಗೆಯೇ ಹಾಸನ ಜಿಲ್ಲೆಯು ತನ್ನ ನೆರೆಯ ಜಿಲ್ಲೆಗಳಿಂದ ಸ್ಫೂರ್ತಿಗೊಂಡು ಬಯಲು ಬಹಿರ್ದೆಸೆ ಮುಕ್ತವಾಯಿತು.[10]

ಧಾರವಾಡ ಜಿಲ್ಲೆಯಲ್ಲಿ ವೈಯಕ್ತಿಕ ಶೌಚಾಲಯಗಳಿಗಾಗಿ ಜಾಗೃತಿ ಮೂಡಿಸಲು ಹಾಗೂ ಜನರಲ್ಲಿ ಈ ನಿಟ್ಟಿನಲ್ಲಿ ಅರಿವು ಮೂಡಿಸಲು ಎನ್‌ವೈಕೆ ಹಾಗೂ ಎನ್‌ಎಸ್‌ಎಸ್ ಕಾರ್ಯಕರ್ತರಿಂದ ಸ್ವಚ್ಛ ಸಿದ್ಧಿ ಯಾತ್ರಾ ಹೆಸರಿನಲ್ಲಿ ಕಾಲ್ನಡಿಗೆಯ ಜಾಥಾ ನಡೆಸಲಾಯಿತು. ಜಿಲ್ಲಾ ಸಿಇಓ ಶ್ರೀಮತಿ ಸ್ನೇಹಲ್ ಅವರ ನೇತೃತ್ವದಲ್ಲಿ ಧಾರವಾಡ ಬಯಲು ಬಹಿರ್ದೆಸೆ ಮುಕ್ತಗೊಂಡಿತು.[11]

ದಾವರಣಗೆರೆಯ ಸ್ವಚ್ಛತಾ ನಡೆ ಅಪರೂಪವಾದದ್ದು, ಮಹಿಳೆ ಹಾಗೂ ಮಕ್ಕಳ ಅಭಿವೃದ್ಧಿ ಹಾಗೂ ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನು ಒಟ್ಟುಗೂಡಿಸಲಾಯಿತು. ಮನೆಯಲ್ಲಿ ಶೌಚಾಲಯವನ್ನು ಉಪಯೋಗಿಸುವ ಗರ್ಭಿಣಿ ಮಹಿಳೆಯರಿಗೆ ಸಾಂಪ್ರದಾಯಿಕ ಸೀಮಂತ ಮಾಡಲಾಯಿತು. ಹಾಲು ಕುಡಿಸುತ್ತಿರುವ ತಾಯಂದಿರಿಗೂ ಪ್ರೋತ್ಸಾಹ ನೀಡಲಾಯಿತು. ನಗರವನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸುವಲ್ಲಿ ಶಾಲಾ ಮಕ್ಕಳ ಪಾತ್ರ ಕೂಡಾ ದೊಡ್ಡದ್ದು.[12]

ಗದಗ ಜಿಲ್ಲೆಯಲ್ಲಿ ಅಧಿಕಾರಿಗಳ ವಿನೂತನ ಯೋಜನೆಗಳಿಂದ ಹಲವು ಕಾರ್ಯಕ್ರಮಗಳನ್ನು ನಡೆಸಲಾಯಿತು. ಬಯಲಿಗೆ ಶೌಚಕ್ಕೆ ಹೋದವರಿಗೆ ಗುಲಾಬಿ ಹೂ ನೀಡುವುದು ಅಥವಾ ಹೂವಿನ ಮಾಲೆ ಹಾಕಿ ಮುಜುಗರ ಉಂಟು ಮಾಡುವುದು, ಅವರ ಕೈಯಿಂದ ಚೊಂಬು ಕಿತ್ತುಕೊಳ್ಳುವುದು ಮುಂತಾದ ಚಟುವಟಿಕೆಗಳು, ಇದರೊಂದಿಗೆ ವಸತಿ ನಿಲಯದ ವಿದ್ಯಾರ್ಥಿಗಳ ಮೂಲಕ ತಮ್ಮ ಪೋಷಕರಿಗೆ ಶೌಚಾಲಯ ಕಟ್ಟಲು ಒತ್ತಾಯಿಸಿ ಪತ್ರ ಬರೆಸುವುದು, ಧಾರ್ಮಿಕ ಉಪನ್ಯಾಸಗಳು, ಶೌಚಾಲಯ ರಹಿತ ಮನೆಗಳಿಗೆ ನೋಟಿಸ್ ಕಳುಹಿಸುವುದು ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಯಿತು. ಜಿಲ್ಲೆಯಲ್ಲಿ ಶೌಚಾಯಲಗಳನ್ನು ನಿರ್ಮಿಸಿ ಬಯಲು ಬಹಿರ್ದೆಸೆ ಮುಕ್ತವೆಂದು ಘೋಷಿಸಲಾಯಿತು. ಒಂದೇ ದಿನದಲ್ಲಿ 25 ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹಮ್ಮಿಕೊಳ್ಳಲಾಯಿತು.[13]

ಕೊಪ್ಪಳ ಜಿಲ್ಲೆಯಲ್ಲಿ ಸೃಜನಾತ್ಮಕ ಚಟುವಟಿಕೆಗಳಿಂದ ಸ್ವಚ್ಛತಾ ಅಭಿಯಾನ ನಡೆಸಲಾಯಿತು. ವಿದ್ಯಾರ್ಥಿಗಳೂ ಸೇರಿದಂತೆ ಸುಮಾರು 15,000 ಮಂದಿಯ ಮಾನ ಸರಪಳಿ ನಿರ್ಮಿಸಲಾಯಿತು. 200 ಗಂಟೆಗಳಲ್ಲಿ 21,000 ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಅಭಿಯಾನಯಡಿ ಬಳಕೆ ಮಾಡಲಾಗದ ನೀರಿನ ಕ್ಯಾನ್‌ಗಳಿಂದ ಪುರುಷರ ಶೌಚಾಲಯವನ್ನು ನಿರ್ಮಿಸಲಾಯಿತು.[14]

**ಹಿಂದುಳಿದ ಜಿಲ್ಲೆಗಳ ಪ್ರಗತಿಯ ಮುನ್ನೋಟ**

ಕರ್ನಾಟಕದ 26 ಜಿಲ್ಲೆಗಳನ್ನು ಬಯಲು ಬರ್ಹಿದೆಸೆ ಮುಕ್ತ ಎಂದು ಘೋಷಿಸಲಾಗಿದೆ. ಉಳಿದ ಐದು ಜಿಲ್ಲೆಗಳಾದ ವಿಜಯಪುರ (99%) ಬೀದರ್ (100%), ರಾಯಚೂರು (99.63%) ಮತ್ತು ಬೆಳಗಾವಿ (98.21%) ಪ್ರಗತಿ ಸಾಧಿಸಿ, ಸಂಪೂರ್ಣ ಸ್ವಚ್ಛತೆಯತ್ತ ನಡೆಯುತ್ತಿವೆ. ಜಿಲ್ಲೆಗಳನ್ನು ಬಯಲು ಬರ್ಹಿದೆಸೆ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಬೇಕೆಂಬ ಉದ್ದೇಶದಿಂದ ರಾಜ್ಯ ಸರ್ಕಾರ ಸ್ವಚ್ಛ ಭಾರತ ಅಂದೋಲನದ ಮೂಲಕ ವಿನೂತನ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.[15]

ರಾಯಚೂರು ಜಿಲ್ಲೆಯ ಸ್ವಚ್ಛತಾ ಅಭಿಯಾನದಲ್ಲಿ ಗ್ರಾಮ ಪಂಚಾಯತ್ ಹಾಗೂ ಸ್ವಸಹಾಯ ಸಂಘಗಳ ಪಾತ್ರ ದೊಡ್ಡದು. ರಾಯಚೂರು ಜಿಲ್ಲೆಯಲ್ಲಿ ಪಿಡಿಓಗಳು, ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಗ್ರಾಮ ಪಂಚಾಯತ್ ನೋಡಲ್ ಅಧಿಕಾರಿಗಳೊಂದಿಗೆ ಬೇರೆ ಬೇರೆ ರೀತಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಾಷ್ಟ್ರೀಯ ಗ್ರಾಮೀಣ ಜೀವನಾಭಿವೃದ್ಧಿ ಮಿಷನ್‌ನ ಮೂಲಕ ಸ್ವಸಹಾಯ ಗುಂಪುಗಳನ್ನು ಸ್ವಚ್ಛತಾ ಆಂದೋಲನದಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿನಿಂದ ಆದ ಶೌಚಾಲಯಗಳ ನಿರ್ಮಾಣ ಕಾಮಗಾರಿಯನ್ನು ತಾಲೂಕು ಪಂಚಾಯತಿಯ ಅಧಿಕಾರಿಗಳಿಂದ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯತ್ ಅಥವಾ ತಾಲೂಕು ಪಂಚಾಯತ್ ಅಧಿಕಾರಿಗಳಿಂದ ಜನರಿಗೆ ಸ್ಫೂರ್ತಿ ತುಂಬುವ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಉತ್ತಮವಾಗಿ ಕೆಲಸ ಮಾಡಿದ ಗ್ರಾಮ ಪಂಚಾಯತ್ ಅಥವಾ ತಾಲೂಕು ಪಂಚಾಯತ್‌ನ ಅಧಿಕಾರಿಗಳು ಅಥವಾ ಅಧಿಕಾರೇತರ ವರ್ಗದವರಿಗೆ ವಿಶೇಷ ದಿನದಂದು ಸನ್ಮಾನ ಮಾಡಲಾಗುತ್ತಿದೆ.[16]

ಕಲಬುರಗಿ ಜಿಲ್ಲೆಯಲ್ಲಿ ನೇರವಾಗಿ ಫಲಾನುಭವಿಗಳೊಂದಿಗೆ ಮಾತುಕತೆ ಮಾಡಲಾಗುತ್ತಿದೆ. ಶೌಚಾಲಯದ ಅವಶ್ಯಕತೆ ಮತ್ತು ಅಗತ್ಯಗಳನ್ನು ತಿಳಿಸಿ ಹೇಳಿ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ತಮ್ಮ ಮನೆಯಲ್ಲಿ ವೈಯಕ್ತಿಕ ಶೌಚಾಲಯವನ್ನು ಕಟ್ಟಿಸಿ ಅದರ ಬಳಕೆ ಮಾಡುವ ಗರ್ಭಿಣಿಯರಿಗೆ ಸೀಮಂತ ಮಾಡುವ ಕೂಸು ಕಾರ್ಯಕ್ರಮ, ಮಿಷನ್ ಸಿರಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಾರ್ಯಕ್ಷೇತ್ರ ಭೇಟಿ, ವಾಟ್ಸಪ್ ಗುಂಪುಗಳ ಮೂಲಕ ಪ್ರತಿದಿನದ ಬೆಳವಣಿಗೆಯ ಪರಿಷ್ಕರಣೆ, ವಾರಕ್ಕೆ ಒಂದರಿಂದ ಎರಡು ಬಾರಿ ವೀಡಿಯೋ ಕಾನ್ಫರೆನ್ಸ್‌ಗಳ ಮೂಲಕ ಮಾತುಕತೆ, ಸ್ವಚ್ಛತೆಯೇ ಸೇವೆಯ ಅಡಿಯಲ್ಲಿ 100 ದಿನಗಳ ಸವಾಲು, ರಾಜಕೀಯ, ಆಡಳಿತ ಹಾಗೂ ಕಾರ್ಯಕ್ಷೇತ್ರ ಸಿಬ್ಬಂದಿಗಳನ್ನು ಆಂದೋಲನದಲ್ಲಿ ಭಾಗಿಯಾಗುವಂತೆ ಮಾಡಿ ಪ್ರತಿಯೊಂದು ಇಲಾಖೆಯ ಸಿಬ್ಬಂದಿ ವರ್ಗದವರನ್ನೂ ಸ್ವಚ್ಛ ಭಾರತ್ ಅಂದೋಲನಕ್ಕೆ ಸಂಪೂರ್ಣ ಸಹಕಾರ ನೀಡುವಂತೆ ಪ್ರೋತ್ಸಾಹಿಸಲಾಗಿದೆ. ಮುಂದಾಳುಗಳನ್ನು ಗುರುತಿಸಿ, ಅವರ ಮೂಲಕ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.[17]

ಯಾದಗಿರಿ ಜಿಲ್ಲೆಯಲ್ಲಿ ಪಂಚಾಯತ್ ಅಧಿಕಾರಿಗಳ ಹಾಗೂ ಸದಸ್ಯರ ಜೊತೆಯಲ್ಲಿ ಜನರಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲು ಉತ್ತೇಜನ ನೀಡಲು ಬಗ್ಗೆ ಸಭೆ ನಡೆಸಲಾಗಿದೆ. ಸ್ವಚ್ಛಾಗ್ರಹಿಗಳು ಹಾಗೂ ಕಾರ್ಯಕರ್ತರಿಗೆ ಈ ಕುರಿತು ಪಂಚಾಯತ್ ಮಟ್ಟದಲ್ಲಿ ತರಬೇತಿ ನೀಡಲಾಗಿದೆ. ಗ್ರಾಮೀಣ ಅಭಿವೃದ್ಧಿ ವಿಶ್ವವಿದ್ಯಾಲಯದ ಕಲಿಕಾ ವಿದ್ಯಾರ್ಥಿಗಳು ಹಾಗೂ ಪರೀಕ್ಷಾರ್ಥ ಅಧಿಕಾರಿಗಳನ್ನು ಸ್ವಚ್ಛತಾ ಕಾರ್ಯದಲ್ಲಿ ಕ್ಷಿಪ್ರ ಪ್ರಗತಿ ಸಾಧಿಸಲು ನೇಮಿಸಲಾಗಿದೆ. ಒಟ್ಟು 466 ಹಳ್ಳಿಗಳಲ್ಲಿ 413 ಹಳ್ಳಿಗಳಲ್ಲಿ ನಾಟಕ, ಕಥನಗೀತೆ,

ಹಾಸ್ಯ, ಸಂಚಾರಿ ವ್ಯಾನನಲ್ಲಿ ಜಾಹೀರಾತು ಫಲಕಗಳ ಅಳವಡಿಕೆ, ಆಕಾಶವಾಣಿಯಲ್ಲಿ ಸ್ವಚ್ಛ ಭಾರತ್ ಅಭಿಯಾನದ ಮಾಹಿತಿ ಮುಂತಾದ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.[18]

### ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆಗಳ ಪ್ರಗತಿಯ ಮುನ್ನೋಟ

ಊರಿಗೊಂದು ದೇವಾಲಯ, ಮನೆಗೊಂದು ಶೌಚಾಲಯ ಎಂಬ ನಾಣ್ಣುಡಿಯಂತೆ ಸ್ವಚ್ಛತೆಯು ಪ್ರತಿಯೊಬ್ಬರ ವೈಯಕ್ತಿಕ ಕರ್ತವ್ಯ. ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಂಡರೆ, ದೇಶದ ಸ್ವಚ್ಛತೆ ಕಾಪಡಿದಂತೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮ ಇಡೀ ದೇಶದಾದ್ಯಂತ ವ್ಯಾಪಕವಾಗಿ ಹರಡಿದ್ದು ದೇಶದ ಬಹುತೇಕ ಜನರು ಇದರಲ್ಲಿ ಕಾರ್ಯನಿರತರಾಗಿದ್ದಾರೆ.

**ಕೋಷ್ಟಕ 1: ಮಂಡ್ಯ ನಗರಸಭೆಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ ನಿರ್ಮಿಸಿರುವ ಶೌಚಾಯಲಗಳ ವಿವರ 2014 – 2021**

| ಕ್ರ.ಸಂ | ವರ್ಷಗಳು | ಗೃಹ ಶೌಚಾಲಯ | ಸಮುದಾಯ ಶೌಚಾಲಯ | ಶಾಲಾ ಶೌಚಾಲಯ | ಅಂಗನವಾಡಿ ಶೌಚಾಲಯ |
|---|---|---|---|---|---|
| 1 | 2014–15 | – | 1 | – | – |
| 2 | 2015–16 | – | – | – | – |
| 3 | 2016–17 | 583 | – | – | – |
| 4 | 2017–18 | – | – | – | – |
| 5 | 2018–19 | – | – | – | – |
| 6 | 2019–20 | – | – | – | – |
| 7 | 2020–21 | – | – | – | – |
| 8 | 2021–22 | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

**ಕೋಷ್ಟಕ 2: ಮದ್ದೂರು ಪುರಸಭೆಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ ನಿರ್ಮಿಸಿರುವ ಶೌಚಾಯಲಗಳ ವಿವರ 2014 – 2021**

| ಕ್ರ.ಸಂ | ವರ್ಷಗಳು | ಗೃಹ ಶೌಚಾಲಯ | ಸಮುದಾಯ ಶೌಚಾಲಯ | ಶಾಲಾ ಶೌಚಾಲಯ | ಅಂಗನವಾಡಿ ಶೌಚಾಲಯ |
|---|---|---|---|---|---|
| 1 | 2014–15 | – | 1 | – | – |
| 2 | 2015–16 | 24 | – | – | – |
| 3 | 2016–17 | 30 | – | – | – |
| 4 | 2017–18 | 38 | – | – | – |
| 5 | 2018–19 | 46 | – | – | – |
| 6 | 2019–20 | – | – | – | – |
| 7 | 2020–21 | – | – | – | – |
| 8 | 2021–22 | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

ಕೋಷ್ಟಕ 1ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿಯಲ್ಲಿ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 2014 ರಿಂದ 2021 ವರೆಗಿನ ಅವಧಿಯಲ್ಲಿ 583 ಗೃಹ ಮತ್ತು 1 ಸಮುದಾಯ ಶೌಚಾಲಯಗಳನ್ನು ಮಾತ್ರ ನಿರ್ಮಿಸಲಾಗಿರುವುದನ್ನು ಕಾಣಬಹುದಾಗಿದೆ. ಉಳಿದಂತೆ ಮುಖ್ಯವಾಗಿ ಬೇಕಾಗಿರುವ ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳಿಗೆ ಗಮನಹರಿಸದೇ ಇರುವುದು ಶೋಚನೀಯವಾಗಿದೆ.

ಮುಂದುವರೆದು, ಕೋಷ್ಟಕ 2ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿಯಲ್ಲಿ ಮಂಡ್ಯ ನಗರಸಭೆಗಿಂತ ಗಮನಾರ್ಹವಾದ ಬೆಳವಣಿಗೆಯನ್ನು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ ಗಮನಿಸಬಹುದಾಗಿದೆ. ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ 2015 ರಿಂದ 2019 ವರೆಗಿನ ಅವಧಿಯಲ್ಲಿ ಒಟ್ಟು 138 ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದ್ದು, ಇದರಲ್ಲಿ 2015 ರಿಂದ 16 ಸಾಲಿನಲ್ಲಿ ಒಟ್ಟು 24, 2016 ರಿಂದ 17 ಸಾಲಿನಲ್ಲಿ ಒಟ್ಟು 30, 2017 ರಿಂದ 18

ಸಾಲಿನಲ್ಲಿ ಒಟ್ಟು 38, ಮತ್ತು 2018 ರಿಂದ 19 ಸಾಲಿನಲ್ಲಿ ಒಟ್ಟು 46 ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಹಾಗೆಯೇ 2014 ರಿಂದ 201–22ರವರೆಗೆ 1 ಸಮುದಾಯ ಶೌಚಾಲಯ ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಇದರಲ್ಲಿಯೂ, ಮಂಡ್ಯ ನಗರ ಸಭೆಯಂತೆ ಮುಖ್ಯವಾಗಿ ಬೇಕಾಗಿರುವ ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳಿಗೆ ಗಮನಹರಿಸದೇ ಇರುವುದು ಶೋಚನೀಯವಾಗಿದೆ.

**ಗೃಹ ಶೌಚಾಲಯಗಳ ನಿರ್ಮಾಣಕ್ಕೆ ಪ್ರೋತ್ಸಾಹ ಧನ**

ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿ ಮಂಡ್ಯ ನಗರಸಭೆ ಮತ್ತು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ 2014 ರಿಂದ 2021 ರವರೆಗೆ ಗೃಹ ಶೌಚಾಲಯ ನಿರ್ಮಿಸಿಕೊಂಡ ಬಿಪಿಎಲ್. ಎಸ್.ಸಿ, ಎಸ್.ಟಿ. ಇತರೆ ಕುಟುಂಬಗಳನ್ನು ಗುರುತಿಸಿ ಪ್ರೋತ್ಸಾಹ ಧನವನ್ನು ಪಾವತಿಸಲಾಗಿದೆ.

**ಕೋಷ್ಟಕ 3: ಮಂಡ್ಯ ನಗರಸಭೆಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ ಗೃಹ ಶೌಚಾಯಲಗಳ ನಿರ್ಮಾಣಕ್ಕೆ ಪಾವತಿಸಲಾದ ಪ್ರೋತ್ಸಾಹಧನ 2014 ರಿಂದ 2021 (ರೂ.ಲಕ್ಷಗಳು)**

| ಕ್ರ. ಸಂ | ವರ್ಷ | ಬಿಪಿಎಲ್ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಸಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಟಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಇತರೆ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ |
|---|---|---|---|---|---|---|---|---|---|
| 1 | 2014 | – | – | – | – | – | – | – | – |
| 2 | 2015 | – | – | – | – | – | – | – | – |
| 3 | 2016 | – | – | 268 | 14.29 | – | – | 315 | 16.80 |
| 4 | 2017 | – | – | – | – | – | – | – | – |
| 5 | 2018 | – | – | – | – | – | – | – | – |
| 6 | 2019 | – | – | – | – | – | – | – | – |
| 7 | 2020 | – | – | – | – | – | – | – | – |
| 8 | 2021 | – | – | – | – | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

**ಕೋಷ್ಟಕ 4 : ಮದ್ದೂರು ಪುರಸಭೆಯಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ ಗೃಹ ಶೌಚಾಯಲಗಳ ನಿರ್ಮಾಣಕ್ಕೆ ಪಾವತಿಸಲಾದ ಪ್ರೋತ್ಸಾಹಧನ 2014 ರಿಂದ 2021 (ರೂ.ಲಕ್ಷಗಳು)**

| ಕ್ರ. ಸಂ | ವರ್ಷ | ಬಿಪಿಎಲ್ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಸಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಎಸ್.ಟಿ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ | ಇತರೆ ಕುಟುಂಬ ಸಂಖ್ಯೆ | ಪ್ರೋತ್ಸಾಹ ಧನ |
|---|---|---|---|---|---|---|---|---|---|
| 1 | 2014 | – | – | – | – | – | – | – | – |
| 2 | 2015 | 24 | 1.95 | – | – | – | – | – | – |
| 3 | 2016 | 30 | 2.40 | – | – | – | – | – | – |
| 4 | 2017 | 38 | 3.00 | – | – | – | – | – | – |
| 5 | 2018 | 46 | 3.64 | – | – | – | – | – | – |
| 6 | 2019 | – | – | – | – | – | – | – | – |
| 7 | 2020 | – | – | – | – | – | – | – | – |
| 8 | 2021 | – | – | – | – | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

ಕೋಷ್ಟಕ 3ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿಯಲ್ಲಿ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 2016 ಸಾಲಿನಲ್ಲಿ ಮಾತ್ರ ಪ್ರೋತ್ಸಾಹಧನ ನೀಡಲಾಗಿದ್ದು, ಇದರಲ್ಲಿ ಗೃಹ ಶೌಚಾಯಲಗಳ ನಿರ್ಮಾಣಕ್ಕೆ ಪಾವತಿಸಲಾದ ಪ್ರೋತ್ಸಾಹಧನ ಪಡೆದ ಎಸ್.ಸಿ ಕುಟುಂಬ ಸಂಖ್ಯೆ 268 ಇದ್ದು, ಇವರಿಗೆ ನೀಡಲಾದ ಪ್ರೋತ್ಸಾಹ ಧನದ ಪ್ರಮಾಣ ಶೇಕಡವಾರು 14.29 ರಷ್ಟಿದೆ. ಇದರ ಜೊತೆಗೆ ಶೌಚಾಯಲಗಳ ನಿರ್ಮಾಣಕ್ಕೆ ಪಾವತಿಸಲಾದ ಪ್ರೋತ್ಸಾಹಧನ ಪಡೆದ ಇತರೆ ಕುಟುಂಬ ಸಂಖ್ಯೆ 315 ಇದ್ದು, ಇವರಿಗೆ ನೀಡಲಾದ ಪ್ರೋತ್ಸಾಹ ಧನದ ಪ್ರಮಾಣ ಶೇಕಡವಾರು 16.80 ರಷ್ಟಿರುವುದನ್ನು ಕಾಣಬಹುದಾಗಿದೆ.

ಮುಂದುವರೆದು, ಕೋಷ್ಟಕ 4ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಅಭಿಯಾನ ಯೋಜನೆಯಡಿಯಲ್ಲಿ ಮಂಡ್ಯ ನಗರಸಭೆಗಿಂತ ಗಮನಾರ್ಹವಾದ ಬೆಳವಣಿಗೆಯನ್ನು ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ ಗಮನಿಸಬಹುದಾಗಿದೆ. ಮದ್ದೂರು ಪುರಸಭೆ ವ್ಯಾಪ್ತಿಯಲ್ಲಿ 2015 ರಿಂದ 2019 ವರೆಗಿನ ಅವಧಿಯಲ್ಲಿ ಒಟ್ಟು 138 ಬಿಪಿಎಲ್ ಕಾರ್ಡ್ ಕುಟುಂಬಗಳು ಗೃಹ ಶೌಚಾಯಲಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ ಪಡೆದಿದ್ದು. ಇದರಲ್ಲಿ, 2015 ಸಾಲಿನಲ್ಲಿ ಪಾವತಿಸಲಾದ ಪ್ರೋತ್ಸಾಹಧನ ಪಡೆದ 24 ಬಿಪಿಎಲ್ ಕಾರ್ಡ್ ಕುಟುಂಬಗಳು 1.95 ರಷ್ಟು ಪ್ರೋತ್ಸಾಹಧನವನ್ನು ಸ್ವೀಕರಿಸಿರುತ್ತೇವೆ. 2016 ಸಾಲಿನಲ್ಲಿ ಪಾವತಿಸಲಾದ ಪ್ರೋತ್ಸಾಹಧನ ಪಡೆದ 30 ಬಿಪಿಎಲ್ ಕಾರ್ಡ್ ಕುಟುಂಬಗಳು 2.40 ರಷ್ಟು ಪ್ರೋತ್ಸಾಹಧನವನ್ನು ಸ್ವೀಕರಿಸಿರುತ್ತೇವೆ. 2017 ಸಾಲಿನಲ್ಲಿ ಪಾವತಿಸಲಾದ ಪ್ರೋತ್ಸಾಹಧನ ಪಡೆದ 38 ಬಿಪಿಎಲ್ ಕಾರ್ಡ್ ಕುಟುಂಬಗಳು 3.00 ರಷ್ಟು ಪ್ರೋತ್ಸಾಹಧನವನ್ನು ಸ್ವೀಕರಿಸಿರುತ್ತೇವೆ. ಹಾಗೆಯೇ 2018 ಸಾಲಿನಲ್ಲಿ ಪಾವತಿಸಲಾದ ಪ್ರೋತ್ಸಾಹಧನ ಪಡೆದ 46 ಬಿಪಿಎಲ್ ಕಾರ್ಡ್ ಕುಟುಂಬಗಳು 3.64 ರಷ್ಟು ಪ್ರೋತ್ಸಾಹಧನವನ್ನು ಸ್ವೀಕರಿಸಿರುವುನ್ನು ಕಾಣಬಹುದಾಗಿದೆ.

**ಕೇಂದ್ರ ಮತ್ತು ರಾಜ್ಯ ಅನುದಾನ ವಿವರಗಳು**

ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬಯಲು ಬಹಿರ್ದಸೆ ಅಭ್ಯಾಸಗಳನ್ನು ನಿರ್ಮೂಲನೆ ಮಾಡಲು ಅಕ್ಟೋಬರ್ 2, 2014ರಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ನಿರ್ಮಿಸಿ ಬಳಸುವ ಅರ್ಹ ಫಲಾನುಭವಿಗಳಿಗೆ ರೂ. 12,000/–ಗಳ (ಕೇಂದ್ರ ಪಾಲು ರೂ. 7200/– ರಾಜ್ಯದ ಪಾಲು ರೂ. 4800/–) ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

**ಕೋಷ್ಟಕ 5: ಮಂಡ್ಯ ನಗರ ಸಭೆಗೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 2014 ರಿಂದ 2021 ರವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನ (ರೂ.ಲಕ್ಷಗಳು)**

| ಕ್ರ ಸಂ | ವರ್ಷವಾರು | ಕೇಂದ್ರ ಸರ್ಕಾರ | | ರಾಜ್ಯ ಸರ್ಕಾರ | |
|---|---|---|---|---|---|
| | | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ |
| 1 | 2014–15 | – | – | – | – |
| 2 | 2015–16 | – | – | – | – |
| 3 | 2016–17 | 62.96 | 56.89 | 7.79 | 5.89 |
| 4 | 2017–18 | – | – | – | – |
| 5 | 2018–19 | 42.06 | 42.06 | 28.05 | 28.05 |
| 6 | 2019–20 | 102.00 | 102.00 | 68.00 | 68.00 |
| 7 | 2020–21 | 6.00 | 1.80 | 4.00 | 1.20 |
| 8 | 2021–22 | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

**ಕೋಷ್ಟಕ 6: ಮದ್ದೂರು ಪುರಸಭೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ 2014 ರಿಂದ 2021 ರವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನ (ರೂ.ಲಕ್ಷಗಳು)**

| ಕ್ರ. ಸಂ | ವರ್ಷವಾರು | ಕೇಂದ್ರ ಸರ್ಕಾರ | | ರಾಜ್ಯ ಸರ್ಕಾರ | |
|---|---|---|---|---|---|
| | | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ | ಬಿಡುಗಡೆಯಾದ ಮೊತ್ತ | ವೆಚ್ಚವಾದ ಮೊತ್ತ |
| 1 | 2014–15 | – | – | – | – |
| 2 | 2015–16 | – | – | – | – |
| 3 | 2016–17 | 62.96 | 56.89 | 7.79 | 5.89 |
| 4 | 2017–18 | – | – | – | – |
| 5 | 2018–19 | 42.06 | 42.06 | 28.05 | 28.05 |
| 6 | 2019–20 | 102.00 | 102.00 | 68.00 | 68.00 |
| 7 | 2020–21 | 6.00 | 1.80 | 4.00 | 1.20 |
| 8 | 2021–22 | – | – | – | – |

**ಮೂಲ:** ಮಾಹಿತಿ ಹಕ್ಕು ಕಾಯಿದೆ ಮೂಲಕ ಮಾಹಿತಿ ಸಂಗ್ರಹ

ಕೋಷ್ಟಕ 5ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮಂಡ್ಯ ನಗರಸಭೆಗೆ 2014 ರಿಂದ 2021 ರವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನ ವಿವರಗಳನ್ನು ಕಾಣಬಹುದಾಗಿದೆ. ಕೇಂದ್ರ ಸರ್ಕಾರವು 2016–17 ಸಾಲಿನಲ್ಲಿ 62.96 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 56.89 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2017–18 ಸಾಲಿನಲ್ಲಿ 42.06 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 42.06 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2018–19 ಸಾಲಿನಲ್ಲಿ 102.00 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 102.00 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. ಹಾಗೆಯೇ 2020–21 ಸಾಲಿನಲ್ಲಿ 6.00 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 1.80 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ.

ರಾಜ್ಯ ಸರ್ಕಾರವು 2016–17 ಸಾಲಿನಲ್ಲಿ 7.79 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 5.89 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2017–18 ಸಾಲಿನಲ್ಲಿ 28.05 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 28.05 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2018–19 ಸಾಲಿನಲ್ಲಿ 68.00 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 68.00 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. ಹಾಗೆಯೇ 2020–21 ಸಾಲಿನಲ್ಲಿ 4.00 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 1.20 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ.

ಕೋಷ್ಟಕ 6ರಲ್ಲಿ ತೋರಿಸಿರುವಂತೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮದ್ದೂರು ಪುರಸಭೆಗೆ 2014 ರಿಂದ 2021 ರವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನ ವಿವರಗಳನ್ನು ಕಾಣಬಹುದಾಗಿದೆ. ಕೇಂದ್ರ ಸರ್ಕಾರವು 2015–16 ಸಾಲಿನಲ್ಲಿ 3.92 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 0.28 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2016–17 ಸಾಲಿನಲ್ಲಿ

2.94 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 2.46 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2019–20 ಸಾಲಿನಲ್ಲಿ 144.61 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 144.61 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. ಹಾಗೆಯೇ 2020–21 ಸಾಲಿನಲ್ಲಿ 2.50 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 0.42 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ.

ರಾಜ್ಯ ಸರ್ಕಾರವು 2015–16 ಸಾಲಿನಲ್ಲಿ 10.62 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 7.58 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2016–17 ಸಾಲಿನಲ್ಲಿ 5.02 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 3.70 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. 2019–20 ಸಾಲಿನಲ್ಲಿ 61.97 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 61.97 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ. ಹಾಗೆಯೇ 2020–21 ಸಾಲಿನಲ್ಲಿ 2.50 ಅನುದಾನವನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ 0.42 ರಷ್ಟು ಅನುದಾನ ವೆಚ್ಚವನ್ನು ಮಾಡಲಾಗಿದೆ.

**ಉಪಸಂಹಾರ**

ಮಹಾತ್ಮ ಗಾಂಧೀಜಿ ಅವರು ಸುವರ್ಣ ಗ್ರಾಮಗಳ ರಾಮರಾಜ್ಯದ ಕನಸನ್ನು ಕಂಡಿದ್ದರು. ಇವರು ಸ್ವಚ್ಛತೆ ಮತ್ತು ಜಾತಿ ಆಯಾಮಕ್ಕೆ ಇರುವ ಸಂಬಂಧಗಳ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆ. ಶುಚಿತ್ವವು ಶೌಚ ನೈರ್ಮಲೀಕರಣ, ವೈಯಕ್ತಿಕ ಅಥವಾ ಗ್ರಾಮ, ನಗರ, ಶುಚೀಕರಣವನ್ನು ಮೀರಿ ನಿಲ್ಲುತ್ತದೆ. ಸ್ವಚ್ಛತೆ ವ್ಯಕ್ತಿ, ಸಮಾಜ, ಸರ್ಕಾರಗಳ ನಡುವಿನ ಬಹುಮುಖಿ ಸಂಕೀರ್ಣ ಸಂಬಂಧಗಳನ್ನು ಅನಾವರಣಗೊಳಿಸುತ್ತದೆ.

ಸ್ವಚ್ಛ ಭಾರತ ಅಭಿಯಾನವು ಜನ ಕೇಂದ್ರಿತ, ಬೇಡಿಕೆ ಆಧಾರಿತ ಹಾಗೂ ಸಮುದಾಯ ಸಹಭಾಗಿತ್ವದ ಯೋಜನೆ ಆಗಿರುತ್ತದೆ. ವೈಯಕ್ತಿಕ ಕುಟುಂಬ ಶೌಚಾಲಯಗಳ ನಿರ್ಮಾಣ, ಘನ ಹಾಗೂ ದ್ರವ ತ್ಯಾಜ್ಯ ವಸ್ತುಗಳ ನಿರ್ವಹಣೆ ಮುಂತಾದವುಗಳನ್ನು ಅಭಿಯಾನದಲ್ಲಿ ಅಳವಡಿಸಲಾಗಿದೆ. ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳಿಗೆ ಹಾಗೂ ಉತ್ತಮ ತಾಂತ್ರಿಕ ಗುಣಮಟ್ಟದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಆದ್ಯತೆಯನ್ನು ನೀಡಲಾಗುವುದು. ಶೌಚಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಹಣದ ಅಗತ್ಯ ಇಲ್ಲದಿರುವಿಕೆಯ ಕುರಿತು ಗ್ರಾಮೀಣ ಜನರಲ್ಲಿ ಅರಿವು ಮೂಡಿಸಲು ಸರಳ ಮಾದರಿ ಶೌಚಾಲಯವನ್ನು ಪರಿಚಯಿಸಲಾಗುವುದು.

ಕರ್ನಾಟಕ ರಾಜ್ಯದಲ್ಲಿ (2018ರಲ್ಲಿದ್ದಂತೆ) 30 ಜಿಲ್ಲಾ ಪಂಚಾಯಿತಿಗಳು, 176 ತಾಲೂಕು ಪಂಚಾಯಿತಿಗಳು ಮತ್ತು 6002 ಗ್ರಾಮ ಪಂಚಾಯತಿಗಳಿವೆ. ಕರ್ನಾಟಕ ರಾಜ್ಯವು ಮೊದಲನೆಯ ಹೆಜ್ಜೆಯಾಗಿ ಎಲ್ಲ ಗ್ರಾಮ ಪಂಚಾಯತಿಗಳನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸುವತ್ತ ಗಮನಹರಿಸಿದೆ. 2012–13ನೇ ಸಾಲಿನಲ್ಲಿ ನಡೆಸಿದ ಬೇಸ್‌ಲೈನ್ ಸಮೀಕ್ಷೆಯನ್ವಯ 45,42,655 ಕುಟುಂಬಗಳು ಶೌಚಾಲಯ ರಹಿತವಾಗಿದ್ದು, ನವೆಂಬರ್ 2018ರಲ್ಲಿ ಬೇಸ್‌ಲೈನ್ ಸಮೀಕ್ಷೆಯಂತೆ 45,42,655 ಶೌಚಾಲಯದ ನಿರ್ಮಾಣದ ನಂತರ, ಬಯಲು ಬಹಿರ್ದೆಸೆಮುಕ್ತವೆಂದು ಘೋಷಿಸಿದ ನಂತರ, ಒಡಿಎಫ್ ಪ್ಲಸ್ ಕಾರ್ಯ ಚಟುವಟಿಕೆಗಳಾದ ನೀರಿನ ಮೂಲಗಳ ಮತ್ತು ಸಾರ್ವಜನಿಕ ಜಲ ಮೂಲಗಳ ಸ್ವಚ್ಛತೆ, ವಿಕೇಂದ್ರೀಕೃತ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ, ಚರಂಡಿಗಳು, ಶಾಲೆಗಳು ಮತ್ತು ಅಂಗನವಾಡಿ ಶೌಚಾಲಯಗಳ ನಿರ್ವಹಣೆ, ಕೈ ತೊಳೆಯುವ ಮತ್ತು ವೈಯಕ್ತಿಕ ಸ್ವಚ್ಛತೆ, ತುಂಬಿದ ಶೌಚಗುಂಡಿಗಳನ್ನು ಖಾಲಿ ಮಾಡುವ ಕುರಿತ ತರಬೇತಿ, ಮಾನವ ಮಲ ತ್ಯಾಜ್ಯ ನಿರ್ವಹಣೆ ಇತ್ಯಾದಿಗಳನ್ನು ಕೈಗೊಳ್ಳಬೇಕು. ಕರ್ನಾಟಕ ರಾಜ್ಯವು 100% ಬಯಲು ಬಹಿರ್ದೆಸೆ ಮುಕ್ತವಾದ

ಹಿನ್ನೆಲೆಯಲ್ಲಿ ಪ್ರಸುತ್ತ ಒಡಿಎಫ್ ಪ್ಲಸ್ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಈ ಮೂಲಕ ಗ್ರಾಮಗಳಲ್ಲಿ ಸಂಪೂರ್ಣ ನೈರ್ಮಲ್ಯ ಸಾಧಿಸಲು ಅವಶ್ಯವಿರುವ ವೈಯಕ್ತಿಕ ಸ್ವಚ್ಛತೆ ಅಭ್ಯಾಸ, ಮಲ ತ್ಯಾಜ್ಯ ಸುರಕ್ಷಿತ ಹಾಗೂ ಸೂಕ್ತ ವಿಲೇವಾರಿ, ತ್ಯಾಜ್ಯ ನೀರಿನ ಸಂಸ್ಕರಣೆ ಹಾಗೂ ವೈಜ್ಞಾನಿಕ ರೀತಿಯ ಘನ ತ್ಯಾಜ್ಯ ನಿರ್ವಹಣೆ ಮುಂತಾದ ನೈರ್ಮಲ್ಯಗಳ ಮೇಲೆ ಹೆಚ್ಚಿನ ಗಮನಹರಿಸಬೇಕಾಗಿರುತ್ತದೆ.

ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ) ಮಾರ್ಗಸೂಚಿಗಳನ್ವಯ ರಾಜ್ಯಗಳಿಗೆ ಅನುಗುಣವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ದಿಷ್ಟ ಸವಾಲುಗಳು, ಅಗತ್ಯತೆಗಳು ಮತ್ತು ವಿವಿಧತೆಗಳನ್ನು ಗಮನದಲ್ಲಿರಿಸಿಕೊಂಡು ಅನುಷ್ಠಾನ ಸಾಧ್ಯ ಚೌಕಟ್ಟನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಈ ಅನುಷ್ಠಾನದ ಚೌಕಟ್ಟಿನ ಭಾಗವಾಗಿ ಮತ್ತು ಎಸ್‌ಡಬ್ಲ್ಯೂಎಂ ನಿಯಮಗಳ ಮತ್ತು ಪಿಡಬ್ಲ್ಯೂಎಂ ನಿಯಮಗಳ ಅಗತ್ಯಕ್ಕನುಗುಣವಾಗಿ ಕರ್ನಾಟಕ ರಾಜ್ಯವು ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ಈ ರಾಜ್ಯ ನೀತಿಯನ್ನು ಅಳವಡಿಸಿಕೊಳ್ಳಲು ಪ್ರಸ್ತಾಪಿಸಿರುತ್ತದೆ.

**ಕೊನೆಟಿಪ್ಪಣಿಗಳು**

1. ಬಯಲು ಬಹಿರ್ದೆಸೆ ಮುಕ್ತ ರಾಜ್ಯದತ್ತ ಕರ್ನಾಟಕ (2018, ನವೆಂಬರ್). *ಯೋಜನಾ ಅಭಿವೃದ್ಧಿ ಮಾಸಪತ್ರಿಕೆ.* ಪು.ಸಂ.26
2. ಅದೇ. ಪು.ಸಂ.26
3. ಅದೇ. ಪು.ಸಂ.26
4. ಅದೇ. ಪು.ಸಂ.26
5. ಅದೇ. ಪು.ಸಂ.27
6. ಅದೇ. ಪು.ಸಂ.27
7. ಅದೇ. ಪು.ಸಂ.27
8. ಅದೇ. ಪು.ಸಂ.27
9. ಅದೇ. ಪು.ಸಂ.27
10. ಅದೇ. ಪು.ಸಂ.27
11. ಅದೇ. ಪು.ಸಂ.27
12. ಅದೇ. ಪು.ಸಂ.28
13. ಅದೇ. ಪು.ಸಂ.28
14. ಅದೇ. ಪು.ಸಂ.28
15. ಅದೇ. ಪು.ಸಂ.29
16. ಅದೇ. ಪು.ಸಂ.29
17. ಅದೇ. ಪು.ಸಂ.28
18. ಅದೇ. ಪು.ಸಂ.28